ವಿಂಧ್ಯಾ ಪರ್ವತದಿಂದ ಹಿಮಾಲಯದವರೆಗೆ ಚಲಿಸುತ್ತಿದ್ದವು' ಎಂದೇನೂ ನಾವೀಗ ಭಾವಿಸಬೇಕಿಲ್ಲ. ಕನ್ನಡದ ಕವಿ ನೇಮಿಚಂದ್ರ ಹೇಳಿದ ಹಾಗೆ 'ಕವಿ ಬಂಧದೊಳ್ ಕಟ್ಟಿದರಲ್ತೇ'.

ಹಾಗಂತ ದೆಹಲಿಯಲ್ಲಿ ಮಳೆಯೇ ಬರುವುದಿಲ್ಲ ಎಂದೇನೂ ಅರ್ಥವಲ್ಲ. ಯಾವಾಗಲೋ ಒಮ್ಮೆ ಭಾರೀ ಮಳೆ ಬಂದು ದನಕರುಗಳಿಗೆ ತೊಂದರೆಯಾದಾಗ ಗೋವರ್ಧನ ಪರ್ವತವನ್ನು ಎತ್ತಿ ಗೋವುಗಳನ್ನು ರಕ್ಷಿಸಿದ ಕೃಷ್ಣ ದೆಹಲಿಗೆ ಹತ್ತಿರದಲ್ಲಿಯೇ ಇದ್ದ. ಈ ಕಥೆಯ ಅಂತರಾರ್ಥ ಚೆನ್ನಾಗಿದೆ. ಇಲ್ಲಿ ಮಳೆ ಬರುವುದಿಲ್ಲ. ಯಾವತ್ತೋ ಒಮ್ಮೆ ಮಳೆ ಬಂದರೆ ಎಲ್ಲರಿಗೂ ತೊಂದರೆ. ಊರಿಗೆ ಊರೇ ಸ್ತಬ್ಧವಾಗುತ್ತದೆ. ಉತ್ತರ ಭಾರತದ ಊರುಗಳನ್ನು ಮಳೆಗೆ ಸಜ್ಜುಗೊಳಿಸದೇ ಇರುವುದರಿಂದ ಮಳೆ ಬಂದಾಗ ಅವಾಂತರಗಳು ಸಹಜವೇ ಹೌದು. ಜೊತೆಗೆ ದೆಹಲಿಯ ವಾತಾವರಣ ಮಾಲಿನ್ಯ ಎಲ್ಲರಿಗೂ ಗೊತ್ತಿರುವುದೇ. ಲಕ್ಷಾಂತರ ವಾಹನಗಳ ಓಡಾಟ, ಕೃಷಿಕೆಲಸಗಳಿಂದ ಹೊರಹೊಮ್ಮುವ ಹೊಗೆ, ರಾಜಕಾರಣಿಗಳು ಉಗುಳುವ ಹೊಗೆ, ಇತ್ಯಾದಿಗಳಿಂದ ಆಕಾಶ ಕಪ್ಪಾಗಿ, ದೆಹಲಿ ಜನರಿಗೆ ಚಂದ್ರದರ್ಶನದ ಭಾಗ್ಯವೇ ದೊರೆಯುವುದಿಲ್ಲ. ಒಂದು ಚಂದ್ರನೇ ಕಾಣದಿದ್ದಾಗ ಸಹಸ್ರ ಚಂದ್ರ ದರ್ಶನ ಮಾಡುವುದಾದರೂ ಹೇಗೆ? ಯಾರೋ ಮಾಡಿದ ಪುಣ್ಯದಿಂದ ಎಂದೋ ಒಮ್ಮೆ ಮಳೆ ಬಂದರೆ ಆಕಾಶದ ಕಪ್ಪೆಲ್ಲ ನೀರಿನ ಜೊತೆ ಸೇರಿ ಭುವಿಗಿಳಿಯುತ್ತದೆ. ಆ ಹೊತ್ತಿಗೆ ಯಾರಾದರೂ ಮಳೆಯಲ್ಲಿ ಆಟವಾಡೋಣ ಅಂತ ಮನೆಯಿಂದ ಹೊರಗಿಳಿದರೆ, ಮರುದಿನ ಆಸ್ಪತ್ರೆಗೆ ಸೇರುವುದು ಖಂಡಿತ. ಮಳೆಯ ಮರುದಿನ ಹೊರಗೆ ನಿಲ್ಲಿಸಿದ ನಮ್ಮ ಕಾರನ್ನು ಪತ್ತೆ ಹಚ್ಚಲು ನಾವೇ ಶ್ರಮಿಸಬೇಕಾಗುತ್ತದೆ. ನೀವು ಯಾವುದೇ ಬಣ್ಣದ ಕಾರನ್ನು ಕೊಳ್ಳಿರಿ, ಮಳೆಯ ಮರುದಿನ ಮಾತ್ರ ಅವುಗಳ ಬಣ್ಣವೂ ಕಪ್ಪೇ! ಹೀಗಾಗಿ ನಮಗೆ ದೆಹಲಿಯಲ್ಲಿ ಮಳೆ ಬೇಕೋ ಬೇಡವೋ ಎಂದು ಸ್ಪಷ್ಟವಾಗಿ ಗೊತ್ತಿಲ್ಲ. ಮಳೆ ಬರಬೇಕು ಅಂತೇವೆ, ಬಂದರೆ ಬೇಡ ಅಂತೇವೆ!.

ದೆಹಲಿಯ ಮಳೆಯೇ ಅಲ್ಲದ ಮಳೆಯ ಕಥೆಯಿಂದ ಬಿಡಿಸಿಕೊಂಡು ಸುಮಾರು ಆರು ದಶಕಗಳಷ್ಟು ಹಿಂದೆ ಹೋದರೆ, ಬಂಟಮಲೆಯ ಕಾಡಲ್ಲಿ ಕುಳಿತು ಅಪ್ಪ ಹೇಳಿದ ಘಟನೆಯೊಂದು ಕಿವಿಯಲ್ಲಿ ಪಿಸುಗುಡುತ್ತದೆ. ಅಪ್ಪನ ಅಮ್ಮ, ಅಂದರೆ ನನ್ನ ಅಜ್ಜಿ, ಗರ್ಭಿಣಿಯಾಗಿದ್ದಾಗ ಹೆರಿಗೆಗಾಗಿ ತವರು ಮನೆಗೆ ಹೋಗಿದ್ದರಂತೆ. ಅಲ್ಲಿಯೇ ಅಪ್ಪ ಹುಟ್ಟಿದರು. ಮಗು ಹುಟ್ಟಿದ ಕೆಲವು ದಿನಗಳಲ್ಲಿ ಅಜ್ಜಿ ಮಗುವನ್ನು ಎತ್ತಿಕೊಂಡು ಗಂಡನ ಮನೆಗೆ ಹೋಗಬೇಕಾಗಿದ್ದರೂ, ಸುರಿವ ಭಾರೀ ಮಳೆಯಿಂದಾಗಿ ಕೆಲವು ವಾರಗಳವರೆಗೆ ತವರು ಮನೆಯಿಂದ ಹೊರಡಲೇ ಆಗಲಿಲ್ಲವಂತೆ. ಬಂಟಮಲೆಯ ಸುತ್ತಮುತ್ತ ಈಗಲೂ ಹಾಗೆ. ಎರಡು ವರ್ಷದ ಹಿಂದೆ ಮಳೆ ನೋಡಲೆಂದೇ ಊರಿಗೆ ಹೋಗಿ, ಬಂಟಮಲೆಯೇ ಜರಿದು ಬೀಳುವಂಥ ಮಳೆಗೆ ಹೆದರಿ, ತಿಂಗಳಿಡೀ ಮನೆಯೊಳಗೇ ಕುಳಿತುಬಿಟ್ಟಿದ್ದೆ. ಅಲ್ಲಿ ಮಳೆ ಬಂದರೆ ಹನಿ ಕಡಿಯುವುದಿಲ್ಲ, ದಿನ, ವಾರ, ತಿಂಗಳುಗಳ ಪರಿವೆಯೇ ಇಲ್ಲದಂತೆ. ಆ ಹೊತ್ತಿಗೆ ಗುಡ್ಡದಲ್ಲಿ ತೊರೆಗಳು ಇದ್ದಕ್ಕಿದ್ದಂತೆ ಕಾಣಿಸಿಕೊಂಡು ತಮ್ಮದೇ ಹಾದಿ ಮಾಡಿಕೊಂಡು ಹರಿಯುತ್ತವೆ. ಜುಳು ಜುಳು ಒರತೆಗಳು ಭೂಮಿಯೊಳಗಿಂದ ಮೇಲಕ್ಕೆ ಚಿಮ್ಮತೊಡಗುತ್ತವೆ. ಬಂಟಮಲೆಯ ಸುತ್ತೆಲ್ಲ ಪುಟ್ಟ ಪುಟ್ಟ ಜಲಪಾತಗಳು. ಮಳೆ ನೀರು ಸೇರಿ ಹೊಳೆಗಳು ಅಬ್ಬರಿಸತೊಡಗುತ್ತವೆ. ಮಣ್ಣು ಹೊತ್ತ ನೀರು 'ಕಾಲನ ಕೋಣ'ನಂತೆ ಹೂಂಕರಿಸಿ ಹರಿವಾಗ ಯಾರೂ ಮನೆಯಿಂದ ಹೊರಡುವ ಧೈರ್ಯ ಮಾಡುವುದಿಲ್ಲ. ಇಂಥದ್ದರಲ್ಲಿ ಹಸುಕೂಸನ್ನು ಕಂಕುಳಲ್ಲಿರಿಸಿಕೊಂಡು ತಾಯಿಯೊಬ್ಬಳು ಆ ಕಾಲದಲ್ಲಿ ನಡೆಯುವುದುಂಟೇ? ಹೀಗಾಗಿ ನಿಗದಿ ಪಡಿಸಿದ ದಿನದಂದು ಅಜ್ಜಿಗೆ ತನ್ನ ಗಂಡನ ಮನೆಗೆ ತಲುಪಲಾಗಲಿಲ್ಲ. ಎಷ್ಟೋ ದಿನಗಳಾದ ಆನಂತರ, ಮಳೆ ಕಡಿಮೆ ಆದ ಮೇಲೆ ಕೂಸನ್ನು ಕಟ್ಟಿಕೊಂಡು ಗಂಡನ ಮನೆಗೆ ಹಿಂದಿರುಗಿದ ಅಜ್ಜಿಯನ್ನು ಅಜ್ಜ ಮನೆಯೊಳಕ್ಕೆ ಸೇರಿಸಿಕೊಳ್ಳಲೇ ಇಲ್ಲವಂತೆ. ಮಗುವನ್ನು ಮಾತ್ರ ಉಳಿಸಿಕೊಂಡು ಅಜ್ಜಿಯನ್ನು ಕೈಬಿಟ್ಟರು. ಆ ಅಜ್ಜಿ ಮುಂದೆ ಎಲ್ಲಿ ಹೋದರೋ ಯಾರಿಗೂ ತಿಳಿಯದು. ಮಳೆ ಅಂದಾಗ ನನಗೆ ಅಜ್ಜಿಯ ನೆನಪು ಬಂದು ಎದೆ ಝಲ್ ಅನ್ನುತ್ತದೆ.

1950 ರ ದಶಕದ ಕೊನೆಯ ಹೊತ್ತಿಗೆ ಅಪ್ಪ ಅಮ್ಮನ ಜೊತೆಗೆ ಕುಕ್ಕೇ ಸುಬ್ರಹ್ಮಣ್ಯ ಸಮೀಪದ ಏನೇಕಲ್ಲು ಎಂಬ ಊರಲ್ಲಿದ್ದೆ. ಬಡತನದ ಕಾರಣದಿಂದ ಅಣ್ಣಂದಿರಿಬ್ಬರು ಬೇರೆಲ್ಲೋ ಸೇರಿಕೊಂಡಿದ್ದರು.